॥ ಓಂ ನಮ: ಶಿವಾಯ ॥

# ಶ್ರೀ ಸಿದ್ಧಾರೂಢ ಸ್ವಾಮಿಯವರ ಮಠ ಟ್ರಸ್ಟ್ ಕಮೀಟಿ, ಹುಬ್ಬಳ್ಳಿ-24

## ಪ್ರಾಪಂಚಿಕ ಚಿಂತನೆಯಿಂದ ಅಶಾಂತಿ, ಭಗವಚ್ಚಿಂತನೆಯಿಂದ ಪರಮಶಾಂತಿ – ದಯಾನಂದ ಸರಸ್ವತಿ ಶ್ರೀ

ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಸ್ವಾಮಿ ಮಠದಲ್ಲಿ ದಿನಾಂಕ: 20-06-2023 ರಿಂದ 14-07-2023 ರವರೆಗೆ ನಡೆಯುವ 15ನೇ ವರ್ಷದ ಭಗವಚ್ಚಿಂತನ ಸಾಧನ ಶಿಬಿರದ ಉದ್ಘಾಟನಾ ಸಮಾರಂಭದ ದಿವ್ಯ ಸಾನಿಧ್ಯವನ್ನು ವಹಿಸಿ ಆಶೀರ್ವಚನ ನೀಡಿದ ನ್ಯಾಯ ವೇದಾಂತಾಚಾರ್ಯ ಶ್ರೋ.ಬ್ರ.ಸದ್ಗುರು ಶ್ರೀ ದಯಾನಂದ ಸರಸ್ವತಿ ಮಹಾಸ್ವಾಮಿಗಳು, ಶ್ರೀ ಪೂರ್ಣಾನಂದ ಆಶ್ರಮ, ಕಾಡರಕೊಪ್ಪ ಮಾತನಾಡುತ್ತಾ ಪ್ರಾಪಂಚಿಕ ಚಿಂತನೆಯಿಂದ ಅಶಾಂತಿ, ಭಗವಚ್ಚಿಂತನೆಯಿಂದ ಪರಮಶಾಂತಿ, ಇಂತಹ ಪರಮ ಶಾಂತಿಯನ್ನು ನೀಡುವ ಹಾಗೂ ಜಾತ್ಯಾತೀತವಾಗಿ ಸರ್ವರಿಗೂ ಅದ್ವೈತ ವೇದಾಂತ ತತ್ವವನ್ನು ಭೋದಿಸಿ ನಿಜ ಸುಖದಲ್ಲಿರಿಸುವ ಏಕೈಕ ಸ್ಥಾನವೆಂದರೆ ಅದು ಹುಬ್ಬಳ್ಳಿಯ ಜಗದ್ಗುರು ಶ್ರೀ ಸಿದ್ಧಾರೂಢ ಮಠ ಎಂದು ನುಡಿದರು. ಇವರು ಜ್ಯೋತಿ ಬೆಳಗಿಸುವುದರೊಂದಿಗೆ ಉದ್ಘಾಟಿಸಿ ಮಾತನಾಡುತ್ತಾ ಇಂದಿನ ತಾಂತ್ರಿಕ ಯುಗದಲ್ಲಿ ಮನುಷ್ಯನು ಆಲಸೀಯ ಬದುಕನ್ನು ನಡೆಸುತ್ತಿದ್ದು ಇದರಿಂದ ಸಮಾಜದ  ಮೌಲ್ಯಗಳು ಕುಸಿದು ಹೋಗುತ್ತಿವೆ, ಎಲ್ಲರೂ ವ್ಯವಹಾರಿಕವಾಗಿ ಬದುಕನ್ನು ನಡೆಸುತ್ತಿದ್ದದ್ದು ಇರುವುದು, ಇಂದಿನ ದಿನಗಳಲ್ಲಿ ನಾವೆಲ್ಲರೂ ಉತ್ತಮವಾದ ಜೀವನವನ್ನು ನಡೆಸಬೇಕಾದರೆ ಇಂತಹ ಅಧ್ಯಾತ್ಮ ಶಿಬಿರಗಳಿಂದ ಮಾತ್ರ ಸಾಧ್ಯ ನಮ್ಮ ದಿನ ನಿತ್ಯದ ಸಮಯದಲ್ಲಿ ಭಗವಂತನ ನಾಮಸ್ಮರಣೆಗೆ ಸ್ವಲ್ಪ ಸಮಯವನ್ನು ನಿಗಡಿಪಡಿಸಿ ಜೀವನವನ್ನು ನಡೆಸಬೇಕು ಅಂತಾ ನುಡಿದರು, ಪಾವನ ಸಾನಿದ್ಯ ವಹಿಸಿದ ಗೋಕಾಕದ ಶ್ರೀ ಶಾಮಾನಂದ ಆಶ್ರಮದ ಸದ್ಗುರು ಶ್ರೀ ಅತ್ಯಾನಂದ ಮಹಾಸ್ವಾಮಿಗಳು ಮಾತನಾಡುತ್ತಾ ಭಗವಚ್ಚಿಂತನ ಸಾಧನಶಿಬಿರದಿಂದ ನಮ್ಮಲ್ಲಿರುವ ಕೆಟ್ಟಗುಣಗಳಿಂದ ಮುಕ್ತರಾಗಿ ಒಳ್ಳೆಯ ಗುಣಗಳನ್ನು ಅಳವಡಿಸಿಕೊಂಡು ಸನ್ಮಾರ್ಗದತ್ತ ನಡೆಯುವುದಕ್ಕೆ ಈ ಶಿಬಿರವು ಬಹಳಷ್ಟು ಉಪಯುಕ್ತವಾಗಿದೆ. ಪ್ರತಿಯೊಬ್ಬರು ಭಗವಂತನ ನಾಮಸ್ಮರಣೆ ಚಿಂತನೆ ಮಾಡುವುದರಿಂದ ಮನಸ್ಸಿನ ನೆಮ್ಮದಿ, ಶಾಂತಿ ನೆಲೆಸುವುದು ಹಾಗೂ ಇಂತಹ ಮಹತ್ಕಾರ್ಯವನ್ನು ಟ್ರಸ್ಟ್ ಕಮೀಟಿಯವರು ಮಾಡುತ್ತಿರುವುದು ಶ್ಲಾಘನೀಯವಾಗಿದೆ ಅಂತಾ ನುಡಿದರು, ನೇತೃತ್ವ ವಹಿಸಿದ್ದ ಸಹಜಯೋಗಿ ಶ್ರೋ.ಬ್ರ.ಸದ್ಗುರು ಶ್ರೀ ಸಹಜಾನಂದ ಮಹಾಸ್ವಾಮಿಗಳು, ಪೀಠಾಧ್ಯಕ್ಷರು, ಶ್ರೀ ಸಿದ್ಧಾರೂಢರ ದರ್ಶನ ಪೀಠ, ಚಿಕ್ಕನಂದಿ, ಇವರು ಮಾತನಾಡಿ ಜಗದ್ಗುರು ಶ್ರೀ ಸಿದ್ಧಾರೂಢರ ಸಾನಿಧ್ಯದಲ್ಲಿ ಭಗವಚ್ಚಿಂತನ ಸಾಧನ ಶಿಬಿರ ನಡಸಬೇಕೆಂಬುವುದು ಬಹಳ ದಿನಗಳಿಂದ ಉತ್ಕಟ ಇಚ್ಚೆಯಾಗಿತ್ತು ಇದು ಹದಿನೈದು ವರ್ಷಗಳಿಂದ ನಿರ್ವಿಘ್ನವಾಗಿ ನಡೆಸಿಕೊಂಡು ಬಂದದ್ದು ಜಗದ್ಗುರು ಶ್ರೀ ಸಿದ್ಧಾರೂಢರ ಕೃಪಾಶೀರ್ವಾದ ಎಂದು ನುಡಿದರು.  ಸಮ್ಮುಖ ಸ್ಥಾನವನ್ನು ಶ್ರೀ ಬಸವರಾಜ ಸ್ವಾಮಿಗಳು, ರನ್ನತಿಮ್ಮಾಪೂರ ಹಾಗೂ ಪರಮಪೂಜ್ಯ ಶ್ರೀ ಸದಾಶಿವ ಗುರೂಜಿ, ರನ್ನಬೆಳಗಲಿ ಇವರು ವಹಿಸಿದ್ದರು, ಸಭೆಯ ಅಧ್ಯಕ್ಷತೆಯನ್ನು ಶ್ರೀಮಠದ ಚೇರ್‌ಮನ್ನರಾದ ಶ್ರೀ ಬಸವರಾಜ ಸಿ. ಕಲ್ಯಾಣಶೆಟ್ಟರ ಇವರು ವಹಿಸಿದ್ದರು, ಭಗವಚ್ಚಿಂತನ ಸಾಧನ ಶಿಬಿರದ ಸಂಚಾಲಕರು ಹಾಗೂ ಶ್ರೀಮಠದ ಧರ್ಮದರ್ಶಿಗಳಾದ ಶ್ರೀ ಶಾಮಾನಂದ ಬಿ. ಪೂಜೇರಿ ಇವರು ಪ್ರಾಸ್ತವಿಕವಾಗಿ ಮಾತನಾಡಿ ಸರ್ವರನ್ನು ಸ್ವಾಗತಿಸಿದರು. ವೈಸ್-ಚೇರ್‌ಮನ್ನರಾದ ಶ್ರೀ ಉದಯಕುಮಾರ ಡಿ. ನಾಯ್ಕ ಇವರು ವಂದಿಸಿದರು. ಶ್ರೀ ಎಸ್.ಆಯ್.ಕೋಳಕೂರ ಇವರು ಕಾರ್ಯಕ್ರಮವನ್ನು ನಿರ್ವಹಿಸಿದರು. ಪ್ರಾರ್ಥನೆಯನ್ನು ಶ್ರೀ ಗುರುಸಿದ್ದಪ್ಪ ಕುಲಗೋಡ ಇವರು ನೆರವೇರಿಸಿದರು,

ಈ ಸಂದರ್ಭದಲ್ಲಿ ಗೌರವ ಕಾರ್ಯದರ್ಶಿಗಳಾದ ಶ್ರೀಮತಿ ಸರ್ವಮಂಗಳಾ ಎನ್. ಪಾಠಕ,  ಧರ್ಮದರ್ಶಿಗಳಾದ  ಶ್ರೀ ಬಾಳು ಮಗಜಿಕೊಂಡಿ, ಶ್ರೀ ಚನ್ನವೀರ ಮುಂಗುರವಾಡಿ, ಶ್ರೀಮತಿ ಗೀತಾ ಕಲಬುರ್ಗಿ ಹಾಗೂ ಶ್ರೀಮಠದ ಮ್ಯಾನೇಜರ ಶ್ರೀ ಈರಣ್ಣ ತುಪ್ಪದ ಹಾಗೂ ನೂರಾರು ಜನ ಸಾಧಕರು ಮತ್ತು  ಭಕ್ತರು ಉಪಸ್ಥಿತರಿದ್ದರು.

ತಮ್ಮ ಪ್ರಕಟಣಾಭಿಲಾಷಿಗಳು

(ಸರ್ವಮಂಗಳಾ ಎನ್. ಪಾಠಕ)
ಗೌರವ ಕಾರ್ಯದರ್ಶಿಗಳು

(ಶಾಮಾನಂದ ಬಾ. ಪೂಜೇರಿ)
ಶ್ರೀಮಠದ ಧರ್ಮದರ್ಶಿಗಳು ಹಾಗೂ
ಸಂಚಾಲಕರು ಭಗವಚ್ಚಿಂತನ ಸಾಧನ ಶಿಬಿರ

(ಬಸವರಾಜ ಸಿ. ಕಲ್ಯಾಣಶೆಟ್ಟರ)
ಚೇರಮನ್ನರು